ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 201 (248)
ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು
ಉತ್ತರಿಸಬೇಕಾದ ದಿನಾಂಕ : 18.08.2026

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಹವಾಮಾನ ಆಧಾರಿತ ಬೆಳೆ ವಿಮಾ ಕ್ಲೇಮುಗಳನ್ನು ಕೆಲವು ಜಿಲ್ಲೆಗಳಲ್ಲಿ ಇತ್ಯರ್ಥಪಡಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದಕ್ಕೆ ಕಾರಣಗಳೇನು	ಗಮನಕ್ಕೆ ಬಂದಿರುತ್ತದೆ. ಆಯಾ ಬೆಳೆಗಳ ರಿಸ್ಕ್ ಅವಧಿ ಪೂರ್ಣಗೊಂಡ ನಂತರ, ಅಧಿಸೂಚಿತ ಹವಾಮಾನ ಕೇಂದ್ರಗಳ ಹವಾಮಾನ ಮಾಹಿತಿಯ ಆಧಾರದ ಮೇಲೆ ಕ್ಲೇಮ್‌ಗಳನ್ನು ಲೆಕ್ಕಹಾಕಿ, ಅನುಷ್ಠಾನ ವಿಮಾ ಸಂಸ್ಥೆಗಳ ಮೂಲಕ ಅರ್ಹ ಕ್ಲೇಮುಗಳನ್ನು ಇತ್ಯರ್ಥಪಡಿಸಲಾಗುತ್ತದೆ. ಕೆಲವು ಪ್ರಕರಣಗಳಲ್ಲಿ ರೈತರ ಬ್ಯಾಂಕ್ ಖಾತೆ ವಿವರಗಳಲ್ಲಿನ ವ್ಯತ್ಯಾಸದಿಂದಾಗಿ ಪರಿಹಾರ ಜಮೆಯಾಗಿರುವುದಿಲ್ಲ. ಇಂತಹ ಪ್ರಕರಣಗಳನ್ನು ರೈತರ ಸಹಯೋಗದೊಂದಿಗೆ ಸರಿಪಡಿಸಿ, ಅರ್ಹ ರೈತರಿಗೆ ವಿಮಾ ಪರಿಹಾರ ಪಾವತಿಸಲು ವಿಮಾ ಸಂಸ್ಥೆಗಳ ಮೂಲಕ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
ಆ)	ವಿಮಾ ಕ್ಲೇಮುಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಇತ್ಯರ್ಥಪಡಿಸಿರುವ ಹಾಗೂ ಇತ್ಯರ್ಥಪಡಿಸಲು ಬಾಕಿಯಿರುವ ಮೊತ್ತ ಎಷ್ಟು; ಜಿಲ್ಲೆ ನೋಂದಾಯಿಸಿದ ರೈತರ ಸಂಖ್ಯೆ, ಅರ್ಹ ರೈತರ ಅರ್ಜಿಗಳ ಸಂಖ್ಯೆ, ಲೆಕ್ಕ ಹಾಕಿರುವ ವಿಮಾ ಪರಿಹಾರ ಮೊತ್ತ, ಇತ್ಯರ್ಥಪಡಿಸಲಾದ ಅರ್ಜಿಗಳ ಸಂಖ್ಯೆ ಪಾವತಿಸಿದ ಮೊತ್ತ, ಬಾಕಿಯಿರುವ ಅರ್ಜಿಗಳ ಸಂಖ್ಯೆ ಪಾವತಿಗೆ ಬಾಕಿಯಿರುವ ವಿಮಾ ಮೊತ್ತದ ಸಂಪೂರ್ಣ ಮಾಹಿತಿ ನೀಡುವುದು.	2024-25ನೇ ಸಾಲಿನ ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಇತ್ಯರ್ಥಪಡಿಸಿರುವ ಮೊತ್ತ ರೂ. 1353.42 ಕೋಟಿ ಹಾಗೂ ಇತ್ಯರ್ಥಪಡಿಸಲು ಬಾಕಿಯಿರುವ ಮೊತ್ತ ರೂ. 23.64 ಕೋಟಿ, ನೋಂದಾಯಿಸಿದ ರೈತರ ಸಂಖ್ಯೆ: 7,51,924, ಅರ್ಹ ರೈತರ ಅರ್ಜಿಗಳ ಸಂಖ್ಯೆ: 7,45,433, ಲೆಕ್ಕ ಹಾಕಿರುವ ವಿಮಾ ಪರಿಹಾರ ಮೊತ್ತ ರೂ.1377.06 ಕೋಟಿ, ಇತ್ಯರ್ಥಪಡಿಸಲಾದ ಅರ್ಜಿಗಳ ಸಂಖ್ಯೆ: 7,41,738, ಪಾವತಿಸಿದ ಮೊತ್ತ ರೂ.1353.42 ಕೋಟಿ , ಬಾಕಿಯಿರುವ ಅರ್ಜಿಗಳ ಸಂಖ್ಯೆ 3695, ಪಾವತಿಗೆ ಬಾಕಿಯಿರುವ ವಿಮಾ ಮೊತ್ತ ರೂ.23.64 ಕೋಟಿ. ಸಂಪೂರ್ಣ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. 2025-26ನೇ ಸಾಲಿನಲ್ಲಿ 981053 ರೈತ ಪ್ರಕರಣಗಳು ನೋಂದಣಿಯಾಗಿದ್ದು, ಆಯಾ ಬೆಳೆಗಳ ನಿಗದಿತ ರಿಸ್ಕ್ ಅವಧಿ ಪೂರ್ಣಗೊಂಡಿರುವ ಬೆಳೆಗಳಿಗೆ ಸಂಬಂಧಿಸಿದಂತೆ, ಅಧಿಸೂಚಿತ ಹವಾಮಾನ ಕೇಂದ್ರಗಳಲ್ಲಿ ದಾಖಲಾಗಿರುವ ಹವಾಮಾನ ಮಾಹಿತಿಯ ಆಧಾರದ ಮೇಲೆ ಕ್ಲೇಮ್

		ಲೆಕ್ಕಾಚಾರವನ್ನು ಪೂರ್ಣಗೊಳಿಸಿ, ಸಂಬಂಧಿಸಿದ ಅನುಷ್ಠಾನ ವಿಮಾ ಸಂಸ್ಥೆಯ ಸಮ್ಮತಿ ಪಡೆದು ಅರ್ಹ ಕ್ಲೇಮುಗಳನ್ನು ಇತ್ಯರ್ಥಪಡಿಸಲು ಕ್ರಮವಹಿಸಲಾಗುತ್ತಿದೆ. 2026-27ನೇ ಸಾಲಿನಲ್ಲಿ, ಅಧಿಸೂಚಿತ ತೋಟಗಾರಿಕೆ ಬೆಳೆಗಳಿಗೆ ಈವರೆಗೆ ಒಟ್ಟಾರೆ 12,00,318 ರೈತರ ಅರ್ಜಿಗಳು ನೋಂದಣಿಯಾಗಿರುತ್ತವೆ. ನೋಂದಣಿ ಪ್ರಕ್ರಿಯೆಯು ಪ್ರಸ್ತುತ ಪ್ರಗತಿಯಲ್ಲಿರುತ್ತದೆ.
ಇ)	ವಿಮಾ ಪರಿಹಾರವನ್ನು ಯಾವ ರೀತಿ ಲೆಕ್ಕ ಹಾಕಲಾಗುತ್ತದೆ ಹಾಗೂ ಬಾಕಿಯಿರುವ ವಿಮಾ ಕ್ಲೇಮುಗಳನ್ನು ಯಾವ ಕಾಲಮಿತಿಯೊಳಗೆ ಇತ್ಯರ್ಥಪಡಿಸಲು ಕ್ರಮವಹಿಸಲಾಗುವುದು; (ವಿವರ ನೀಡುವುದು);	ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ವಿಮಾ ಪರಿಹಾರವನ್ನು ಈ ಮುಂದಿನಂತೆ ಲೆಕ್ಕ ಹಾಕಲಾಗುತ್ತದೆ. 1. ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ ಒಟ್ಟು ವಿಮಾ ಮೊತ್ತ (Sum Insured) ವನ್ನು Scale of Finance ಆಧಾರದ ಮೇರೆಗೆ SLCCCI (State Level Coordination Committee on Crop Insurance) ಯ ಅನುಮೋದನೆಯೊಂದಿಗೆ ನಿಗಧಿಪಡಿಸಲಾಗುತ್ತದೆ. 2. ಕೇಂದ್ರ ಸರಕಾರದಿಂದ empanel ಆದ ವಿಮಾ ಸಂಸ್ಥೆಗಳ ಪೈಕಿ ಟೆಂಡರ್ ಮೂಲಕ ಜಿಲ್ಲಾವಾರು ಅತಿ ಕಡಿಮೆ ಪ್ರೀಮಿಯಂ ನಮೂದಿಸುವ (lowest weighted premium) ವಿಮಾ ಸಂಸ್ಥೆಯನ್ನು ಅನುಷ್ಠಾನ ವಿಮಾ ಸಂಸ್ಥೆಯಾಗಿ ಆಯ್ಕೆ ಮಾಡಲಾಗುತ್ತದೆ ಹಾಗೂ ಒಟ್ಟು ಪ್ರೀಮಿಯಂ ಮೊತ್ತ ನಿಗಧಿಪಡಿಸಲಾಗುತ್ತದೆ. ರೈತರು ಒಟ್ಟು ವಿಮಾ ಮೊತ್ತದ 5% ವಿಮಾ ಕಂತು ಪಾವತಿಸಬೇಕಾಗುತ್ತದೆ. 3. ವಿವಿಧ ವಿಮಾ ಘಟಕಗಳಲ್ಲಿ ಬೆಳೆಗಳನ್ನು ಅಧಿಸೂಚಿಸಿ, ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು/ ಹೋಬಳಿವಾರು ಟರ್ಮ್ ಶೀಟ್ ಗಳನ್ನು ಸಿದ್ಧಗೊಳಿಸಲಾಗುತ್ತದೆ. 4. ಪ್ರತಿ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಹವಾಮಾನ ಹಾಗೂ ಮಳೆ ಪ್ರಮಾಣ ಪಡೆಯಲು ಮುಖ್ಯ (Reference) ಮತ್ತು ಬ್ಯಾಕಪ್ ಹವಾಮಾನ ಕೇಂದ್ರ/ ಮಳೆ ಮಾಪನಾ ಕೇಂದ್ರಗಳನ್ನು (AWS & TRGs) ಅಧಿಸೂಚಿಸಲಾಗಿರುತ್ತದೆ. 5. ಆಯಾ ವಿಮಾ ಘಟಕ/ ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಅಧಿಸೂಚಿತ ಮುಖ್ಯ (Reference) ಮತ್ತು ಬ್ಯಾಕಪ್ ಹವಾಮಾನ ಕೇಂದ್ರಗಳಲ್ಲಿ ದಾಖಲಾದ ಹವಾಮಾನ ಸೂಚ್ಯಂಕಗಳ ಆಧಾರದ ಮೇರೆಗೆ ಸಂಭವಿಸಬಹುದಾದ ಬೆಳೆ ನಷ್ಟವನ್ನು ಟರ್ಮ್ ಶೀಟ್‌ಗಳ ಪ್ರಕಾರ ಅಂದಾಜಿಸಲಾಗುತ್ತದೆ ಹಾಗೂ ಅದರಂತೆ ಋತುವಾರು ನೋಂದಾಯಿಸಲ್ಪಟ್ಟ ರೈತರಿಗೆ ವಿಮಾ ಪರಿಹಾರ ಮೊತ್ತವನ್ನು ವಿಮಾ ಸಂಸ್ಥೆಯಿಂದ ವಿತರಿಸಲಾಗುತ್ತದೆ.

		ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯಡಿ ಕ್ಲೇಮುಗಳ ಇತ್ಯರ್ಥವು ಆಯಾ ಬೆಳೆಯ ನಿಗದಿತ ರಿಸ್ಕ್ ಅವಧಿ ಪೂರ್ಣಗೊಳ್ಳುವುದು, ಅಧಿಸೂಚಿತ ಹವಾಮಾನ ಕೇಂದ್ರಗಳಲ್ಲಿ ದಾಖಲಾಗಿರುವ ಹವಾಮಾನ ದತ್ತಾಂಶದ ಆಧಾರದ ಮೇಲೆ ಕ್ಲೇಮ್ ಲೆಕ್ಕಾಚಾರ ಪೂರ್ಣಗೊಳಿಸುವುದು ಹಾಗೂ ಸಂಬಂಧಿಸಿದ ಅನುಷ್ಠಾನ ವಿಮಾ ಸಂಸ್ಥೆಯ ಸಮ್ಮತಿ ಪಡೆಯುವುದು ಸೇರಿದಂತೆ ಹಲವು ಹಂತಗಳನ್ನು ಒಳಗೊಂಡ ನಿರಂತರ ಪ್ರಕ್ರಿಯೆಯಾಗಿರುತ್ತದೆ. ಆದ್ದರಿಂದ, ಎಲ್ಲಾ ಬೆಳೆಗಳು ಮತ್ತು ಪ್ರಕರಣಗಳಿಗೆ ಅನ್ವಯಿಸುವಂತೆ ಕ್ಲೇಮುಗಳ ಕುರಿತು ಏಕರೂಪದ ನಿಗದಿತ ಕಾಲಮಿತಿಯನ್ನು ನಿಗದಿಪಡಿಸಲು ಸಾಧ್ಯವಾಗುವುದಿಲ್ಲ.
ಈ)	ತೋಟಗಾರಿಕೆ ಬೆಳೆ ವಿಮಾ ನೋಂದಣಿಯ ಕಡೇ ದಿನಾಂಕವನ್ನು ವಿಸ್ತರಿಸುವ ಕುರಿತು ಸರ್ಕಾರದ ಕ್ರಮವೇನು?	ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರವು, ಅನುಷ್ಠಾನ ವಿಮಾ ಸಂಸ್ಥೆಗಳ ಸಹಮತಿ ಹಾಗೂ ಕೇಂದ್ರ ಸರಕಾರದ ಅನುಮೋದನೆಯೊಂದಿಗೆ 2026-27ನೇ ಸಾಲಿನ ಮುಂಗಾರು ಹಂಗಾಮಿನ ವಿವಿಧ ಜಿಲ್ಲೆಗಳ ಅಧಿಸೂಚಿತ ಬೆಳೆಗಳಿಗೆ ಈ ಹಿಂದೆ ದಿನಾಂಕ: 30-6-2026 ರಂದು ಇದ್ದ ನೋಂದಣಿಯ ಕೊನೆಯ ದಿನಾಂಕವನ್ನು ದಿನಾಂಕ: 15.07.2026 ರವರೆಗೆ ಹಾಗೂ ದಿನಾಂಕ: 31.07.2026ರಂತೆ ಇದ್ದ ನೋಂದಣಿಯ ಕೊನೆಯ ದಿನಾಂಕವನ್ನು ಹಲವು ಜಿಲ್ಲೆಗಳಲ್ಲಿ ದಿನಾಂಕ: 17.08.2026ರವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ. ಅರ್ಹ ರೈತರಿಗೆ ಬೆಳೆ ವಿಮಾ ಯೋಜನೆಯ ಪ್ರಯೋಜನ ಪಡೆಯಲು ಈಗಾಗಲೇ ನೋಂದಣಿಗೆ ಹೆಚ್ಚಿನ ಕಾಲಾವಕಾಶವನ್ನು ಒದಗಿಸಿರುವುದರಿಂದ, ಬೆಳೆ ವಿಮಾ ನೋಂದಣಿಯ ಕೊನೆಯ ದಿನಾಂಕವನ್ನು ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಸಂಖ್ಯೆ: HORTI 435 HGM 2026

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ತೋಟಗಾರಿಕೆ ಬೆಳೆಗಳಿಗೆ ವಿಮಾ ಸಂಬಂಧ ಜಿಲ್ಲಾವಾರು ಇತ್ಯರ್ಥಪಡಿಸಿರುವ ಹಾಗೂ ಬಾಕಿಯಿರುವ ವಿಮಾ ಪರಿಹಾರದ ಮೊತ್ತ ವಿವರ

(ರೂ.ಕೋಟಿಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆ	ನೋಂದಾಯಿಸಿದ ರೈತರ ಅರ್ಜಿಗಳ ಸಂಖ್ಯೆ	ಅರ್ಹ ರೈತರ ಅರ್ಜಿಗಳ ಸಂಖ್ಯೆ	ಲೆಕ್ಕ ಹಾಕಿರುವ ವಿಮಾ ಪರಿಹಾರ ಮೊತ್ತ	ಇತ್ಯರ್ಥಪಡಿಸಲಾದ ರೈತ ಅರ್ಜಿಗಳ ಸಂಖ್ಯೆ	ಪಾವತಿಸಿದ ಮೊತ್ತ	ಬಾಕಿಯಿರುವ ರೈತ ಅರ್ಜಿಗಳ ಸಂಖ್ಯೆ	ಪಾವತಿಗೆ ಬಾಕಿಯಿರುವ ವಿಮಾ ಮೊತ್ತ
1	ಬಾಗಲಕೋಟೆ	5302	5302	79.28	4659	71.12	643	8.15
2	ಬಳ್ಳಾರಿ	167	163	0.70	97	0.36	66	0.34
3	ಬೆಳಗಾವಿ	8685	8685	84.92	8543	84.84	142	0.08
4	ಬೆಂಗಳೂರು ಗ್ರಾಮಾಂತರ	1055	1055	7.28	1055	7.28	0	0.00
5	ಬೆಂಗಳೂರು ನಗರ	30	30	0.16	30	0.16	0	0.00
6	ಬೀದರ್	280	266	0.56	144	0.37	122	0.20
7	ಚಾಮರಾಜನಗರ	12	12	0.01	12	0.01	0	0.00
8	ಚಿಕ್ಕಬಳ್ಳಾಪುರ	3336	3336	15.00	3336	15.00	0	0.00
9	ಚಿಕ್ಕಮಗಳೂರು	70506	66868	95.20	66866	95.20	2	0.00
10	ಚಿತ್ರದುರ್ಗ	5780	5584	15.13	5584	15.13	0	0.00
11	ದಕ್ಷಿಣ ಕನ್ನಡ	332750	332748	276.04	332742	276.04	6	0.00
12	ದಾವಣಗೆರೆ	18687	18687	41.27	18687	41.27	0	0.00
13	ಧಾರವಾಡ	10267	10267	46.68	10091	46.44	176	0.24
14	ಗದಗ	71	71	0.52	71	0.52	0	0.00
15	ಹಾಸನ	10647	10647	14.97	10647	14.97	0	0.00
16	ಹಾವೇರಿ	23595	23595	59.94	22440	56.76	1155	3.18
17	ಕಲಬುರಗಿ	313	304	0.99	164	0.67	140	0.32
18	ಕೊಡಗು	5711	5637	4.09	5637	4.09	0	0.00
19	ಕೋಲಾರ	6191	6191	12.69	6191	12.70	0	-0.01
20	ಕೊಪ್ಪಳ	1624	1624	5.76	1387	5.16	237	0.60
21	ಮಂಡ್ಯ	11	11	0.01	11	0.01	0	0.00
22	ಮೈಸೂರು	12	12	0.02	12	0.02	0	0.00
23	ರಾಯಚೂರು	176	176	0.94	119	0.77	57	0.17
24	ರಾಮನಗರ	9369	9369	25.48	9369	25.48	0	0.00
25	ಶಿವಮೊಗ್ಗ	90811	89857	113.56	89611	113.24	246	0.32
26	ತುಮಕೂರು	15150	13554	19.10	13438	18.96	116	0.15
27	ಉಡುಪಿ	21371	21371	42.35	21371	42.35	0	0.00
28	ಉತ್ತರ ಕನ್ನಡ	90245	90245	74.13	90235	74.12	10	0.01
29	ವಿಜಯನಗರ	641	637	1.21	595	1.09	42	0.11
30	ವಿಜಯಪುರ	19104	19104	338.94	18586	329.21	518	9.73
31	ಯಾದಗೀರ	25	25	0.12	8	0.08	17	0.04
	ಒಟ್ಟು	**751924**	**745433**	**1377.06**	**741738**	**1353.42**	**3695**	**23.64**